# ಅಪರಾಧ ನಮದಲ್ಲ...



ಕೊರೊನಾ ವೈರಸ್‌ನಿಂದ ಉಂಟಾಗಿರುವ ಬಿಕ್ಕಟ್ಟನ್ನು ತಿಳಿಗೊಳಿಸಲು ವೈದ್ಯ ಸಿಬ್ಬಂದಿ ತಮ್ಮ ಜೀವವನ್ನೇ ಪಣಕ್ಕಿಟ್ಟು ಹೋರಾಡುತ್ತಿದೆ. ಹೀಗಿದ್ದರೂ ಕೆಲವು ಸಂತ್ರಸ್ತರು ತನ್ನ ನೋವು, ಅಸಹಾಯಕತೆಯನ್ನು ಸಿಟ್ಟಿನ ರೂಪದಲ್ಲಿ ವೈದ್ಯರ ಮೇಲೆ ವ್ಯಕ್ತಪಡಿಸುತ್ತಿದ್ದಾರೆ. ದೆಹಲಿಯ ಆಸ್ಪತ್ರೆಯೊಂದರಲ್ಲಿ ಕೊರೊನಾ ರೋಗಿಗಳ ಶುಶ್ರೂಷಣೆಯಲ್ಲಿ ತೊಡಗಿರುವ ವೈದ್ಯರೊಬ್ಬರು, ಯಾರೋ ಒಬ್ಬರ ತಪ್ಪಿಗೆ ಇಡೀ ವೈದ್ಯ ಸಮೂಹವನ್ನು ಗುರಿ ಮಾಡುವುದು ಬೇಡ ಎನ್ನುತ್ತಿದ್ದಾರೆ. ವೈಫಲ್ಯಗಳಿಗೆ ಬೆಟ್ಟು ಮಾಡಿ ತೋರಿಸುವುದಕ್ಕಿಂತಲೂ ಇರುವವರನ್ನು ಉಳಿಸಿಕೊಳ್ಳಲು ಹೆಚ್ಚು ಒತ್ತು ನೀಡಬೇಕಾದ ಸಮಯವಿದು ಎನ್ನುವ ಅಭಿಪ್ರಾಯ ಅವರದು.

**■ ಡಾ. ಅರುಣ್ ಕುಮಾರ್ ಎಂ.**

ಬೂದಿ ಮುಚ್ಚಿದ ಕೆಂಡದಂತಿದ್ದ ಕೊರೊನಾ ಜ್ವಾಲಾಮುಖಿಯಂತೆ ಸಿಡಿದಿದೆ. ವೈರಸ್ ಬಗೆಗಿನ ಜನರ ನಿರ್ಲಕ್ಷ್ಯ ಹಾಗೂ ವಿಷ ಬಳ್ಳಿಯ ಎಲೆಗಳನ್ನು ಕಿತ್ತು ಅದನ್ನು ಬುಡಸಮೇತ ನಿರ್ನಾಮ ಮಾಡಿದಂತೆ ಸಂಭ್ರಮಿಸಿದ ಸರ್ಕಾರದ ಅಸಡ್ಡೆತನವೇ ನಮಗೆ ಮುಳುವಾಗಿರವಂತಿದೆ. ಆ ವಿಷ ಬಳ್ಳಿ ಚಿಗುರೊಡೆದು ದೈತ್ಯ ರೂಪದಲ್ಲಿ ಈಗ ನಮ್ಮ ಮುಂದೆ ನಿಂತಿದೆ.

ಈಗಾಗಲೇ ಕುಪೋಷಿತ ಮಗುವಂತಿದ್ದ ನಮ್ಮ ಆರೋಗ್ಯ ವ್ಯವಸ್ಥೆಗೆ ಈ ಹಠಾತ್ ಹೊಡೆತ ಮಾರಣಾಂತಿಕವಾಗಿದೆ. ಕುಂಟುತ್ತಾ ನಡೆಯುತ್ತಿದ್ದ ಆರೋಗ್ಯ ವ್ಯವಸ್ಥೆ ಕಣ್ಣಮುಂದೆಯೇ ಕುಸಿಯತೊಡಗಿತು. ಇದರ ಫಲಿತಾಂಶವೇ ಯಾವ ಆಸ್ಪತ್ರೆಯಲ್ಲೂ ಬೆಡ್ ಇಲ್ಲ, ಆಕ್ಸಿಜನ್ ಇಲ್ಲ, ವೈದ್ಯಕೀಯ ಸಿಬ್ಬಂದಿಯ ತೀವ್ರ ಕೊರತೆ. ಕೊರೊನಾ ರೋಗಿಗಳಿಗೆ ಐಸಿಯು ಬೆಡ್ ಸಿಗುತ್ತಿಲ್ಲ, ವೆಂಟಿಲೇಟರ್, ಔಷಧಿಗಳು ಸಿಗುತ್ತಿಲ್ಲ ಎನ್ನುವ ಹಾಹಾಕಾರ. ಇದೇನು ಹೊಸತಲ್ಲ. ದೇಶದ ಬಹುತೇಕ ದೊಡ್ಡ ದೊಡ್ಡ ಸರ್ಕಾರಿ ಆಸ್ಪತ್ರೆಗಳಲ್ಲಿಯೂ ಕೂಡ ಐಸಿಯು, ವೆಂಟಿಲೇಟರ್ ಹಾಗೂ ಸಿಬ್ಬಂದಿ ಕೊರತೆ ಯಾವಾಗಲೂ ಇದ್ದದ್ದೇ. ಅರ್ಧದಷ್ಟು ರೋಗಿಗಳಿಗೆ ಐಸಿಯು ಸೌಲಭ್ಯ ಸಿಗುವುದೇ ಇಲ್ಲ. ಹಾಗೆ ಉಳಿಸಲಾಗದ ಜೀವಗಳು ಅದೆಷ್ಟೊ. ಇದೆಲ್ಲ ಗೊತ್ತಿದ್ದರೂ ಉನ್ನತ ಅಧಿಕಾರಿಗಳು ಹಾಗೂ ಸರ್ಕಾರಗಳು ತಟಸ್ಥ ಭಾವ ತಾಳುತ್ತವೆ. ಕಳೆದುಕೊಳ್ಳುವ ಜೀವ ಒಬ್ಬ ಕಡುಬಡವನದ್ದು, ಹಾಗಾಗಿ ಯಾರೂ ಕೇಳುವವರಿಲ್ಲ. ಅದೇ ಶ್ರೀಮಂತನೋ, ರಾಜಕಾರಣಿಯೋ ಆಗಿದ್ದರೆ ಎಲ್ಲರೂ ಬರುತ್ತಿದ್ದರು.

ಕೊರೊನಾ ಎರಡನೇ ಅಲೆ ನಮ್ಮ ಆರೋಗ್ಯ ವ್ಯವಸ್ಥೆಯಲ್ಲಿನ ಲೋಪ ಮತ್ತು ಕೊರತೆಗಳನ್ನು ಜಗಜ್ಜಾಹೀರುಗೊಳಿಸಿದೆ.

ಮೂಲಸೌಕರ್ಯಗಳ ಕೊರತೆ, ಸರ್ಕಾರದ ತಾತ್ಸಾರ ಮನೋಭಾವ ಹಾಗೂ ಕೋವಿಡ್ ಬಗೆಗಿನ ಜನರ ಅಸಡ್ಡೆತನ ಇವೆಲ್ಲವೂ ಇಂದಿನ ದುರಂತಕ್ಕೆ ಮೂಲ ಕಾರಣಗಳು. ಆದರೆ ಎಲ್ಲೆಡೆ ಕೇಳಿಬರುವುದು ವೈದ್ಯ ಸಿಬ್ಬಂದಿಯ ಮೇಲೆ ಆರೋಪ. ಅವರು ಕೇವಲ ಸರ್ಕಾರದ ಸೇವಕರು. ಸಿಗುವಂತಹ ಕನಿಷ್ಠ ಸೌಕರ್ಯಗಳಿಂದ ರೋಗಿಗಳಿಗೆ ತಮ್ಮಿಂದಾಗುವ ಚಿಕಿತ್ಸೆಯನ್ನು ಮಾಡುತ್ತಿದ್ದಾರೆ. ಐಸಿಯು ಇಲ್ಲ, ವೆಂಟಿಲೇಟರ್ ಇಲ್ಲ, ಬೆಡ್ ಖಾಲಿ ಇಲ್ಲ ಎಂಬ ಅಪವಾದಗಳನ್ನು ವೈದ್ಯಕೀಯ ಸಿಬ್ಬಂದಿಯ ಮೇಲೆ ಹೊರಿಸುವುದು ಅಮಾನವೀಯ.

ನಾನೊಂದು ಕಥೆ ಹೇಳುತ್ತೇನೆ. ಮಧ್ಯಮ ವರ್ಗದ ಒಂದು ಕುಟುಂಬ. ಮನೆಯ ಯಜಮಾನ, ಪತ್ನಿ ಗೃಹಿಣಿ, ಪುಟ್ಟ ಮಕ್ಕಳು ಮತ್ತು ಹಿರಿಯರೊಬ್ಬರು. ಮನೆಯ ಪೂರ್ತಿ ಜವಾಬ್ದಾರಿ, ಆಯವ್ಯಯಗಳ ಲೆಕ್ಕಾಚಾರ ಯಜಮಾನನದ್ದೇ. ಪತ್ನಿಯ ಕೆಲಸ ಅಡುಗೆಮನೆಗಷ್ಟೇ ಸೀಮಿತವಾಗಿತ್ತು. ಯಜಮಾನನಿಗೆ ಮನೆಯನ್ನು ಅಚ್ಚುಕಟ್ಟಾಗಿ ನಡೆಸುವುದಕ್ಕಿಂತ ಬಾಹ್ಯ ಜೀವನದ ಮೋಹ ಹೆಚ್ಚು. ಹಾಗಾಗಿ ಅದರ ಹೊಡೆತ ಮನೆಯ ದಿನಸಿ ಸಾಮಾನುಗಳ ಮೇಲೆ ಬೀಳುತ್ತಿತ್ತು. ಆದರೂ ಆ ಗೃಹಿಣಿ ಎಲ್ಲವನ್ನು ನಿಭಾಯಿಸುತ್ತಿದ್ದಳು. ಈ ವಿಚಾರವಾಗಿ ಅವಳ ಮಾತುಗಳನ್ನು ಯಜಮಾನ ಕಿವಿಯ ಮೇಲೂ ಹಾಕಿಕೊಳ್ಳುತ್ತಿರಲಿಲ್ಲ. ಒಮ್ಮೆ ಅವರ ಊರಿನಲ್ಲಿ ಒಂದು ಸಮಾರಂಭ ನಡೆಯಿತು. ಮನೆಯ ಕೆಲಸಗಳು ಎಂದಿನಂತೆ ನಡೆಯುತ್ತಿದ್ದವು. ಅಚಾನಕ್ಕಾಗಿ ಒಂದಷ್ಟು ಸಂಬಂಧಿಕರು ಮನೆಗೆ ಧಾವಿಸಿದರು. ಮನೆಯಲ್ಲಿ ಗಡಿಬಿಡಿ, ಎಂದಿನಂತೆ ದಿನಸಿ ಕೊರತೆ. ಮನೆಮಂದಿಯೆಲ್ಲಾ ಹೇಗೋ ಅನುಸರಿಸಿ ಅತಿಥಿಗಳನ್ನು ಉಪಚರಿಸಿದರು. ಯೋಜಿತವಲ್ಲದ ಆಗಮನವಾದ್ದರಿಂದ ಯಾರಿಂದಲೂ ಹೆಚ್ಚಾಗಿ ತಕರಾರಿರಲಿಲ್ಲ. ಹೇಗೋ ಎಲ್ಲವೂ ನಡೆದು ಹೋಯಿತು. ಮನೆಯಾಕೆ ಯಜಮಾನನಿಗೆ ದಿನಸಿಯ ಕೊರತೆಯ ಬಗ್ಗೆ